1899 SATYAVADI Fonnded 1917

# ಸತ್ಯವಾದಿ
# SATYAVADI

(ಅರಮನೆ ಸಿರಸ್ತೇದಾರ್ ಎಂ. ನಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 5 | ಶನಿವಾರ 7—9—46 | ಬಿಡಿ ಪ್ರತಿ 3 ಪೈ

## ಮದರಾಸ್ ಸರ್ಕಾರದ ಮುನ್ನಡೆ

ಅರ್ಹತೆ ಅಧಿಕಾರಗಳನ್ನು ಗಮನಿಸದೆ ಕೇವಲ ಜಾತಿಯನ್ನು ಹಿಡಿದು ಉದ್ಯೋಗಗಳನ್ನು ಹಂಚುವಿಕೆಯು ಕೆಲವು ವರ್ಷಗಳಿಂದ ರೂಢಿಯಲ್ಲಿರುವುದಷ್ಟೆ. ಮದರಾಸು ಅಧಿಪತ್ಯದಲ್ಲಿ ಈ ಪದ್ಧತಿಯು ಕೊನೆಗಾಣುವ ಸೂಚನೆಗಳು ಕಂಡುಬರುತ್ತಿವೆ. ಹಾಗೆ ಆಗುವಿಕೆಯು ಎಲ್ಲಾ ಸರ್ಕಾರಗಳಿಗೂ ಕ್ಷೇಮಕರವಾದ ಮಾತಾಗಿರುತ್ತದೆ

### ಪುಂಡರ ಕಟುಕತನ

ಕಲ್ಕತ್ತಾ ೮ 27— ಉತ್ತರ ಬಸ್ತಿಗೆ ಬೆಂಕಿ ಹಚ್ಚಿದಾಗ ಮಕ್ಕಳು ಹೊರಗೆ ಬಂದರು. ಅವರೊಬ್ಬೊಬ್ಬರನ್ನೆ ಹಿಡಿದು ಪುಂಡರು ಅವರನ್ನು ಬೆಂಕಿಯಲ್ಲಿ ಹಾಕಿದರು. ದಯೆ ತೋರಿಸಬೇಕೆಂದು ಬೇಡುತ್ತಾ ಬಂದ ದೊಡ್ಡವರನ್ನು ಲಾಠಿಯಿಂದ ಹೊಡೆದು ಬೆಂಕಿಗೆ ಹಾಕಿದರು.

ಇನ್ನೊಂದು ಎಡೆಯಲ್ಲಿ 250 ಮಂದಿಯನ್ನು ಒಂದು ಕೋಣೆಯಲ್ಲಿ ತುಂಬಿಸಿ ಬೀಗಹಾಕಿ ಎರಡು ದಿನಗಳ ನಂತರ ಒಬ್ಬೊಬ್ಬರನ್ನಾಗಿ ತುಂಡರಿಸುತ್ತಾ ಬಂದರು. ಅಷ್ಟರಲ್ಲಿ ಪೋಲಿಸರು ಬಂದು 20 ಜನರು ಉಳಿದರು.

### ಧಾನ್ಯ ಸಂಗ್ರಹ ನಷ್ಟ

ಮದ್ರಾಸ ಇಲಾಖೆಯಲ್ಲಿ ಧಾನ್ಯ ಶೇಖರಿಸುವ ಕಾರ್ಯವು ಅತಿ ಜೋರಿನಿಂದ ನಡೆದು ಅಧಿಕಾರಿಗಳು ಮನೆಗಳಲ್ಲಿನುಗ್ಗಿ ಹೆಚ್ಚಿನ ಧಾನ್ಯವನ್ನು ಸ್ವಾಧೀನ ಪಡಿಸಿಕೊಳ್ಳುತ್ತ ಉತ್ಪತ್ತಿದಾರರು ಇದುವರೆಗೆ ಸರಕಾರಕ್ಕೆ ತಿಳಿಸಿದುದಕ್ಕಿಂತ ಹೆಚ್ಚು ಸಂಗ್ರಹಿಸಿದವರನ್ನು ಪ್ರಾಸಿಕೂಶನ್ನಿಗೆ ಗುರಿಮಾಡಹತ್ತಿರುವದರಿಂದ ಜಡತಿ ಸೋಡಲಿಕ್ಕೆ ಅಧಿಕಾರಿಗಳು ಬರುವರೆಂದು ಸುದ್ದಿ ತಿಳಿದ ಕೂಡಲೇ ಸಂಗ್ರಹದಾರರು ತಾವು ಈ ಮುಂಚೆ ಸರಕಾರಕ್ಕೆ ತಿಳಿಸಿದುದಕ್ಕಿಂತ ಹೆಚ್ಚು ಧಾನ್ಯವನ್ನು ಪ್ರಾಸಿಕ್ಯೂಶನ್ನಿಂದ ತಪ್ಪಿಸಿಕೊಳ್ಳಲಿಕ್ಕಾಗಿ ತಿಳಿಸಹತ್ತಿರುವರು.

### ಲೀಗಿನ ಮೇಲೂ ಸಂಸ್ಥಿತೆ

ಶ್ರೀ ಅಂಬೇಡ್ಕರ್‌ರವರ ಪಾರ್ಟಿಯವರೂ ಮುಸ್ಲಿಂ ಲೀಗಿನವರಂತೆ ಬಿರುದುಗಳನ್ನು ಏಸರ್ಜಿಸಿ ಸತ್ಯಾಗ್ರಹವನ್ನು ಮಾಡಬೇಕೆಂದು ಪೂನಾದಲ್ಲಿ ನಿರ್ಣಯಮಾಡಿರುವರು. ಈಗಾಗಲೇ ಮದರಾಸಿನ ಮೇಯರರಾದ ಶಿವರಾಜ್‌ರವರು ತಮ್ಮ 'ದಿವ್ಯ' ಬಹದ್ದೂರ್' ಬಿರುದನ್ನೂ ವಿಸರ್ಜಿಸಿರುವರು.

### ವಿನಾಯಕ ಮಂಗಳಾರತಿ

ಮೈಸೂರು ಸೆ 7 — ಈ ದಿವಸ ಸಂಜೆ ಮೈಸೂರು ಭಾವಸಾರಕ್ಷತ್ರಿಯ ಸೋಷಿಯಲ್ ಸಂಘದವರು ವಿನಾಯಕ ಮಂಗಳಾರತಿಯನ್ನು ನೆರವೇರಿಸುವರು.

### ಮುಸ್ಲಿಂರಿಲ್ಲರೂ ಲೀಗರುಗಳಾಗಬೇಕು

ಕಲ್ಕತ್ತಾ ಸೆ. 6 — 'ಮುಸ್ಲಿಂರುಗಳೆಲ್ಲರೂ ಲೀಗರುಗಳಾಗಬೇಕು. ಮಿ|| ಜಿನ್ನಾರವರ ಮನನಿಯನ್ನು ಮನಸಿ ನಾನು ಲೀಗಿಗೆ ಸೇರಿದೆ' ಎಂಬುದಾಗಿ ಬಂಗಾಳ ಮಾಜಿ ಪ್ರಧಾನಿ ಮಿ|| ಫಜ್ಲಲ್ ಹಕ್ ತಿಳಿಸಿದ್ದಾರೆ.

### ಜಿನ್ನಾ ತಾತ್ಕಾಲಿಕ ಸರ್ಕಾರದಲ್ಲಿ ಭಾಗಿಯಾಗುವರೇ

ಬೊಂಬಾಯಿ ಸೆ. 6 — ಮುಸ್ಲಿಂ ಲೀಗಿನ ಸಹಕಾರಕ್ಕಾಗಿ ನಾಳೆಯ ತಮ್ಮ ಪ್ರಕಾಶವಾಣಿ ಭಾಷಣದಲ್ಲಿ ಪ್ರಧಾನಿ ನೆಹರು ಮತ್ತೊಮ್ಮೆ ಕೋರುವರು. ಮತ್ತು ಭರವಸೆಯಿಯುವರು. ನಾಳೆಯ ಹೊತ್ತಿಗೆ ಮಿ|| ಜಿನ್ನ ಮತ್ತೆ ಕೆಲವು ಲೀಗು ನಾಯಕರು. ದೆಹಲಿಯಲ್ಲಿ ಬಂದಿಳಿಯುವರು.

### ಸಿವಿಲ್ ಸರ್ವಿಸ್ ಆಡಳಿತ ನಿರ್ನಾಮವಾಯಿತು

ಬೊಂಬಾಯಿ ಸೆ. 6 — ಇಂಡಿಯನ್ ಸಿವಿಲ್ ಸರ್ವೀಸ್ ಆಡಳಿತ ನಿರ್ನಾಮವಾಯಿತು. ನಾನಾ ಶಾಖೆಗಳ ಕಾರ್ಯದರ್ಶಿಗಳು ಮೈಸ್ಕಾಯರ ಬಳಿ ಇಟ್ಟಿದ್ದ ನೇರ ಸಂಪರ್ಕ ಅತ್ಯವಾಯಿತು.

## ಪಾಕೀಸ್ತಾನ ನೇರಕಾರ್ಯಚರಣೆ
## ಜಿನ್ನರ ಹೊಸ ನೀತಿಯೇ

### ಪತ್ರಿಕಾ ಪ್ರತಿನಿಧಿಗಳು

ನವದೆಹಲಿ, ಸೆ 6 — ಹನ್ನೆರಡು ಮಂದಿ ಪತ್ರಿಕಾ ಪ್ರತಿನಿಧಿಗಳನ್ನು ನ್ಯೂಯಾರ್ಕಿನಲ್ಲಿ ಸೇರುವ ಜನರಲ್ ಅಸೆಂಬ್ಲಿಗೆ ಕೇಂದ್ರ ಸರ್ಕಾರ ಕಳಿಸುವುದು. ಒಳಭತ್ತು ಮಂದಿ ವೃತ್ತ ಪತ್ರಿಕಾ ಸಮ್ಮೇಳನದಿಂದ ಆರಿಸಲ್ಪಡುವರು. ಇನ್ನು ಮೂರು ಮಂದಿಯನ್ನು ಸರ್ಕಾರ ಆರಿಸುವುದು.

### ಸೇನಾ ನಾಯಕ ಸಂದೇಶ

ನವದೆಹಲಿ ಸೆ. 6 — ಸರ್ದಾರ್ ಬಲದೇವ ಸಿಂಗರಿಗೆ ಭಾರತ ಸೇನಾ ನಾಯಕ ಅರ್ಷಲ್ ಲೇಕ್ ಕಳಹಿಸಿರುವ ಸಂದೇಶದಲ್ಲಿ ತಮ್ಮ ನೇತೃತ್ವದಲ್ಲಿ ಕರ್ತವ್ಯ ಪಾಲಿಸಲು ಆಸಕ್ತನಾಗಿದ್ದೇನೆ ಎಂದು ತಿಳಿಸಿರುವರು.

### ಸುದ್ದಿಗಳು

ಇದೇ ತಾರೀಖು 15 ರಲ್ಲಿ ಜನರಲ್ ಅಸೆಂಬ್ಲಿಯಲ್ಲಿ ಭಾಗವಹಿಸಲು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅಮೇರಿಕಾಕ್ಕೆ ತೆರಳುವರು

ಹೈದರಾಲಾದು ಪ್ರಭುತ್ವವು ಮೈಸೂರಿಗೆ ಹತ್ತು ಸಾವಿರ ಟನ್ ಜೋಳ ಮುಂತಾದ ಧಾನ್ಯಗಳನ್ನು ತುರ್ತಾಗಿ ಕಳಿಸುವುದು.

ಮೈಸೂರು ದಿವಾನರ ವೈಯುಕ್ತಿಕ ಕಾರ್ಯಕರ್ತರನ್ನಾಗಿ ಶ್ರೀ ವಿ. ಬಿ. ವಿಶ್ವನಾಥ ಮೊದಲಿಯಾರರನ್ನು ನೇಮಿಸಲಾಗಿದೆ.

ಕಲ್ಕತ್ತಾ ಗಲಭೆಯ ವಿಚಾರಣಾ ಸಮಿತಿ ಅಧ್ಯಕ್ಷತೆಯನ್ನು ವಹಿಸಬೇಕೆಂದು ಭಾರತ ಪ್ರಧಾನ ನ್ಯಾಯಾಧೀಶ ಸರ್ ಸ್ಯಾಟ್ರಿಕ್ ಸ್ಪೆನ್ಸರಿಗೆ ಆಹ್ವಾನ ತಲುಪಿದೆ.

ತಮ್ಮ ಆಗಮನವನ್ನು ಪ್ರಧಾನಿ ನೆಹರುವಿಗೆ ತಿಳಿಸಿ ನೇತಾಜಿ ಭಾರತಕ್ಕೆ ಬರುವರಂತೆ.

ತಾ || 14 ರಲ್ಲಿ ಬೊಂಬಾಯಿನಲ್ಲಿ ಸೇರು ಫಾರ್ವರ್ಡ್ ಬ್ಲಾಕ್ ಸಮ್ಮೇಳನದಲ್ಲಿ ನೇತಾಜಿ ಕಾಣಬರುವರಂತೆ.

ನವದೆಹಲಿ ಸೆ. 6 — ಭಾರತ ಸರಕಾರವು ಸಯಾಂ ಸರಕಾರಕ್ಕೆ 5 ಕೋಟಿ ರೂ. ಸಾಲ ಕೊಡುವುದು.

### ಜಿನ್ನರ ಹೊಸ ನೀತಿಯೇ

ಬೊಂಬಾಯಿ ಸೆ. 6 — ಮುಸ್ಲಿಂ ಲೀಗ್ ಪ್ರೆಸಿಡೆಂಟ್ ಜಿನ್ನರು ಸರ್ ಅಲ್ಲಿಯವರಿಗೆ ದಕ್ಷಿಣ ಆಫ್ರಿಕಾ ಭಾರತೀಯ ಸಮಸ್ಯೆಯನ್ನು ವಿಶ್ವ ಸಂಸ್ಥೆಯಲ್ಲಿ ಮುಂದಿಡಲು ಭಾರತ ಸರಕಾರ ಕಳುಹಿಸುವ ಪ್ರಾತಿನಿಧ್ಯದಲ್ಲಿ ಹೋಗಬೇಡಿರೆಂದು ಬುದ್ಧಿವಾದ ಕೊಟ್ಟಿರುವರೆಂದು ಹೇಳಲಾಗಿದೆ.

### ಅವಿಶ್ವಾಸ ನಿರ್ಣಯ

ಕಲ್ಕತ್ತಾ, ಸೆ 6 — ಮುಂದಿನವಾರ ಸಮಾವೇಶಗೊಳ್ಳಲಿರುವ ಪ್ರಾಂತ ಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ಪಕ್ಷ ಬಂಗಾಳ ಸುಹ್ರವರ್ದಿ ಲೀಗ್ ಮಂತ್ರಿಮಂಡಳದ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಲಿರುವರಂತೆ ! ಏಕೋ ಏನು ॥ ಸುಹ್ರವರ್ದಿ ಏನು ॥ ಜಿನ್ನಾರನ್ನು ಭೇಟಿ ಮಾಡಲು ಬೊಂಬಾಯಿಗೆ ತೆರಳಿದರು.

### ಟ್ರೂಮನ್ನರ ನಿರ್ಧಾರ

ವಾಷಿಂಗ್‌ಟನ್ — 1 ಲಕ್ಷ ಮಂದಿ ಯಹೂದ್ಯರನ್ನು ಪ್ಯಾಲಿಸ್ಟೈನಿಗೆ ಸೇರಿಸಲು ಇನ್ನೂ ಪ್ರಯತ್ನ ಪಡುತ್ತಿರುವುದಾಗಿ ಪ್ರೆ || ಟ್ರೂಮನ್ನರು ಹೇಳಿರುವರು. ಈ ವಿಚಾರದಲ್ಲಿ ಬ್ರಿಟಿಷ್ ಮತ್ತು ಅಮೆರಿಕಾ ಸರಕಾರಗಳ ಮಧ್ಯೆ ಪರ್ಯಾಲೋಚನೆ ನಡೆಯುತ್ತಿರುವುದೆಂದೂ ತಿಳಿಸಿದರು.

### ಜಪಾನಿನ ಆಶ್ಚರ್ಯ ವಿಚಾರಣೆ

ಟೋಕಿಯೋ ಸೆ, 5 — ಜಪಾನು ಯುದ್ಧ ಪಾತಕಿಗಳ ವಿಚಾರಣೆಯಲ್ಲಿ ಪ್ರಾಸಿಕ್ಯೂಷನ್ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಯನ್ನು ಬದಲಾಯಿಸಿಕೊಂಡನು. ಆಗ ಟೋಜೋ ತಪ್ಪಿತಸ್ಥನೆಂದಿದ್ದನು. ಜಡ್ಜರು ಅವನನ್ನು ಕೋರ್ಟಿನ ಆಚೆ ಕಳುಹಿಸಿಬಿಟ್ಟರು.

### ರಾಜ್ಯಾಂಗ ರಚನಾ ಸಭೆಗೆ ಮೈಸೂರಿನವರು

ಮೈಸೂರು ಸೆ 6 — ದಸರಾಕಾಲದಲ್ಲಿ ಪ್ರ. ಪ್ರ. ಮತ್ತು ನ್ಯಾ. ವಿ. ಸಭೆಗಳ ಜಂಟಿ ಸಮ್ಮೇಳನವು ನಡೆಸಲ್ಪಟ್ಟು ರಾಜ್ಯಾಂಗ ಸಭೆಗೆ ಸದಸ್ಯರು ಚುನಾಯಿಸಲ್ಪಡುವರೆಂದು ತಿಳಿಯಬಂದಿದೆ

---

ಲಂಡನ್ ಸೆ. 7 — ಗ್ರೀಕ್ ರಾಜನು ದೇಶಕ್ಕೆ ವಾಪಸು ಬಂದು ರಾಜ್ಯಾಧಿಕಾರ ವಹಿಸಲು ತಕ್ಕ ಏರ್ಪಾಡುಗಳು ಮಾಡಲಾಗುತ್ತಿದೆ ಎಂದು ಹೇಳಲಾಗಿ

## ಸವಾರ್ಕರರೆ
## ನಂಥ ಮಾತುಗಳು

ೀಪ್ (ಕ್ರೈಸ್ತ ಮರಾಠಾದಿಪ

ಪ್ರಕಟಣೆ —

ಭಾರತ ದೇಶವೆಂಬ ಸಣ್ಣ ಖಂಡದ ಈ ಮೂಲೆಯಿಂದ ಆ ಮೂಲೆಗೆ ಕ್ರೈಸ್ತ ಜ್ಯೋತಿಯು ಪೂರ್ಣ ಬೆಳಕಿನೊಂದಿಗೆ ಪ್ರಕಾಶಿಸುವುದು.

ಸವಾರ್ಕರ್ — ಎಲೈ ವೈದ್ಯ ರತ್ನವೇ ! ಮೊದಲು ನಿನ್ನ ವ್ಯಾಧಿಯನ್ನು ಗುಣಪಡಿಸಿಕೋ ! ಕ್ರಿಸ್ತ ದೇವನೂ ಮೊದಲು ಯೂರೋಪನ್ನು ಉದ್ಧಾರ ಮಾಡಲಿ. ನಿಮ್ಮ ಗಡಿಯಾವು ಕಾಲಕ್ಕೆ ಹಿಂದೆ ಬಿದ್ದಿದೆ. ಹಿಂದೂ ಸಂಘಟನೆಯೂ ಶುದ್ಧಿ ಉದ್ಯಮವೂ ನೀವು ಹೇಳುವ ಘೋರ ಪ್ರಮಾದವು ನಡೆಯದಂತೆ ಅಡ್ಡ ಹಾಕಿವೆ.

ಂ ಂ

ಅತಿಲೋಕಮೇ ಥಾಸಂಪನ್ನನಾದ ಶ್ರೀ ರಾಜಾಜಿ ಭಾರತ ಸಂಘಟನಪಾದಿಯಾಗಿ ತನ್ನ ಪಾಕೀಸ್ಥಾನದವಾದವು ಸರಿಯೆನ್ನಬಲ್ಲದಾಗಿ ನುಡಿದಾಗ,—

ಸವಾರ್ಕರ್ — ಆಚಾರ್ಯಮಂ ಶೋದ್ಧಾರಣಾದ ಶ್ರೀಮಾನ್ ರಾಜಗೋಪಾಲಾಚಾರ್ಯರನರೇ ! 'ಸಂಘಟನೆ' ಎಂದರೆ ಐಕ್ಯತೆ ವಿಭಿನ್ನತೆ, ವಿಭಜನೆ ಅನೇಕವಾಗಿ ಮಾಡುವಿಕೆ ಎಂದು ಯಾರು ಕಲಿಸಿದ್ದಾರೆ ಸ್ವಾಮಿ !

### ಹೊಸ ಸರ್ಕಾರದಲ್ಲಿ ಸೇನೆಯ ಸ್ಥಾನ

ಯುದ್ಧ ಮಂತ್ರಿಯು ಪ್ರತ್ಯೇಕವಾಗಿರುತ್ತಾನಾಗಲಿ, ಸೇನೆಯು ಮಾತ್ರ ಚಕ್ರವರ್ತಿಯವರ ವಶದಲ್ಲಿರುವಂಥಾದ್ದಾಗಿ ಅವರ ಪ್ರತಿನಿಧಿಯಾದ ವೈಸರಾಯರ ಅಧೀನದಲ್ಲಿರುತ್ತದೆ. ಅಂದರೆ ಪ್ರಧಾನ ಸೇನಾನಿಯಾತನೂ ಆತನ ಸೇನೆಯೂ ವೈಸರಾಯರ ಆಜ್ಞೆಯಲ್ಲಿದ್ದು, ಅಗತ್ಯ ಬಂದಾಗ ಯುದ್ಧ ಮಂತ್ರಿಗೆ ಸಹಾಯ ಪಾಗಿರುವದೆಂದು ಅರ್ಥವಾಗುತ್ತದೆ. ಅಂದರೆ ಹಿಂದಿನ ವೆಲಸ್ಲಿಯವರ 'ಸಬ್ಸಿಡಿ ಸೇನೆ' ಯಂತಿರುತ್ತದೆ.

---

ನೆಹರು — ಪ್ರಕೃತಿಯು ಅವಕಾಶವನ್ನು ದ್ವೇಷಿಸುತ್ತದೆ.

ಸವಾರ್ಕರ್ — ಶ್ರೀ ಪಂಡಿತ ನೆಹರುರವರು ವೇದಾಂತಿಯಲ್ಲ. ವೈದ್ಯರಲ್ಲ. ಆದುದರಿಂದ ಪ್ರಕೃತಿಯು ವಿಷವಾಯುವನ್ನೂ ದ್ವೇಷಿಸುವದೆಂಬುದನ್ನರಿಯರು.

Edited, Printed and Published by M. S. Krishna Rao at the Satyavadi Press, Chamaraja Agrahar, Mysore,

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆಠಾಣೆ

At Ranjit
2nd Houseful Week
Anmol Ghadi
ನೂರ್‌ಜಹಾನ್ — ಸುರೇಂದ್ರ
ಜಹರ್ ರಾಜಾ — ಸುರಿಯ
ಪಾತ್ರವಹಿಸಿರುವ
ಅನ್ಮೋಲ್ ಘುಡಿ
(ಅಮೂಲ್ಯ ಗಡಿಯಾರ)

For Good Printing
L. N. Press
Sriramp et, MYSORE

Get Medical Diplomas
At home : — Ayurvedic Homeopathic, Unani, etc. Prospectus Free.
Old Indian Medical College
Kotgarh, Simla

At Opera From 7-9-46
MY SON
* ಬೇಬಿ ಕಮಲ * ಯು. ಆರ್. ಜೀವರತ್ನಂ ನಟಿಸಿರುವ
ನನ್ನ ಮಗ
ತಮಿಳು) ಪ್ರತಿದಿನ 3 ಆಟಗಳು

ಸುಖ ಆರೋಗ್ಯ ಆನಂದದಾಯಕ
ಜೀವಿತಕ್ಕೆ
ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.



ಈ ಹಿಂಗಿನ ವಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಫೆಂಡ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪, ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಶಕ್ತಿ ಸುಧಾ
ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ
ನಿಸ್ಸಾರವಾದ, ಸತಿಸಿರುವ ದೇಹಕ್ಕೆ ನವಚೈತನ್ಯವನ್ನು ಕೊಡುವುದರಲ್ಲಿ ಅದ್ವಿತೀಯವಾದುದು.
ವಿಳಾಸ — ಶಕ್ತಿಸುಧಾ, 1067 ಚಾಮರಾಜಪುರಂ, ಮೈಸೂರು
SHAKTI SUDHA
For Rich Blood, Strong Nerves & Exuberant Vitality